ಓ.ಎಸ್. ನಂಃ 806/2023
ಪಿ.ಡಬ್ಲ್ಯೂ-1 (ಸತ್ತೆವ್ವ)

ದಿನಾಂಕ: 28-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಮ್.ಡಿ.ಪಿ. 1ನೇ ಪ್ರತಿವಾದಿ ಪರ ವಕೀಲರಿಂದಃ**

6. ನಮ್ಮ ಕುಟುಂಬದ ಮೂಲ ಪುರುಷ ಗುರುಪಾದಪ್ಪ ಇವರಿಗೆ ಸಾಂವಕ್ಕಾ ರಾಮಪ್ಪ ಹಳ್ಳೂರ ಎಂದು ಮಗಳಿದ್ದಾಳೆ ಅವಳು ಖಾಯಂ ಆಗಿ ಮೂಡಲಗಿಯಲ್ಲಿ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮೂಲ ಪುರುಷ ಗುರುಪಾದಪ್ಪ ಇವರಿಗೆ ಮಲ್ಲವ್ವ ಬಾಳಪ್ಪ ಅನಿಗೋಳ ಎಂದು ಮಗಳು ಇದ್ದು, ಅವಳನ್ನು ಬೈಲಹೊಂಗಲ ತಾಲೂಕಿನ ಅಮಟೂರ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಅದೇ ರೀತಿ ಮೂಲ ಪುರುಷ ಗುರುಪಾದಪ್ಪ ಇವರಿಗೆ ಯಲ್ಲವ್ವ ರಾಮಪ್ಪ ತೋಟಗಿ ಎಂದು ಮಗಳು ಇದ್ದಾಳೆ ಎಂದರೆ ಸರಿ.

7. ಮೂಲ ಪುರುಷ ಗುರುಪಾದಪ್ಪ ಇವರ ಇನ್ನೊಬ್ಬರು ಮಗಳಾದ ಗಂಗವ್ವ ಚನ್ನಬಸಪ್ಪ ದೇವರ ಇವರನ್ನು ನನ್ನ ಅಣ್ಣನಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಗಂಗವ್ವ ಚನ್ನಬಸಪ್ಪ ದೇವರ ಈಗ ಮೃತಪಟ್ಟಿದ್ದು ಸದರಿಯವರಿಗೆ ಶಿಲ್ಪಾ ಎಂದು ಮಗಳು ಇದ್ದಾಳೆ ಎಂದರೆ ಸರಿ. ನನ್ನ ತವರು ಮನೆಯ ಅಡ್ಡ ಹೆಸರು ದೇವರ ಎಂದು ಇರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ತವರೂರು ಮನ್ನಿಕೇರಿ ಗ್ರಾಮ ಎಂದರೆ ಸರಿ. ಅವರ ತಂದೆ ಹೆಸರು ನರಸಪ್ಪ ತೋಟಗಿ, ತಾಯಿ ಹೆಸರು ಪಾರ್ವತಿ ತೋಟಗಿ ಎಂದರೆ ಸರಿ.

8. ಹಿಂದೂ ಸಂಪ್ರಾದಯದಲ್ಲಿ ಮದುವೆ ಪೂರ್ವದಲ್ಲಿ ಕನ್ಯಾ ಪರೀಕ್ಷೆಗೆ ಬರುತ್ತಾರೆ ಎಂದರೆ ಸರಿ. ನಂತರ ಹೆಣ್ಣಿನ ಕಡೆಯವರು ಗಂಡನ ಮನೆತನ ನೋಡಲು ಬರುತ್ತಾರೆ ಎಂದರೆ ಸರಿ. ಇಬ್ಬರಿಗು ಒಪ್ಪಿಗೆ ಆದಲ್ಲಿ ನಿಶ್ಚಿತಾರ್ಥ ಮಾಡುತ್ತಾರೆ ಎಂದರೆ ಸರಿ. ವಧು ಮತ್ತು ವರರಿಗೆ ಏನು ಕೊಡಬೇಕೆಂದು ಹೇಳಿ ತೀರ್ಮಾಣಿಸಿ ಯಾದಿ ಮಾಡುತ್ತಾರೆ ಎಂದರೆ ಸರಿ. ನಂತರ ಮದುವೆ ದಿನಾಂಕ ನಿಶ್ಚಯಿಸಿ ಲಗ್ನ ಪತ್ರಿಕೆ ಮುದ್ರಿಸಿ ಮದುವೆ ಮಾಡುತ್ತಾರೆ ಎಂದರೆ ಸರಿ.

9. ಈಗ ಸಾಕ್ಷಿದಾರರಿಗೆ ಮೂರು ಫೋಟೋಗಳನ್ನು ತೋರಿಸಿದ್ದು ಅದರಲ್ಲಿ ಯಲ್ಲಪ್ಪ ಮತ್ತು 1ನೇ ಪ್ರತಿವಾದಿ ಲಕ್ಷ್ಮೀ ಇದ್ದಾರೆ ಎಂದು ಸೂಚಿಸಿದರೆ ಸಾಕ್ಷಿದಾರರು ಒಪ್ಪಿಕೊಳ್ಳುತ್ತಾರೆ. ಸದರಿ ಫೋಟೋಗಳನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು.

10. ದಾವಾ ಆಸ್ತಿಗಳ ಚಕ್ಕಬಂದಿ, ಕ್ಷೇತ್ರ, ಆಕಾರ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರ ಜೊತೆ ನಾನು ಕಬ್ಜಾ ವಹಿವಾಟಿಯಲ್ಲಿ ಇದ್ದೇನೆಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ದಾಖಲೆ ಇರುವುದಿಲ್ಲ ಎಂದರೆ ಸರಿ. ಈ ಹೊತ್ತಿನವರೆಗು ಪ್ರತಿವಾದಿ 1, ಅವರ ಮಕ್ಕಳಾದ 2 ರಿಂದ 5ನೇ ಪ್ರತಿವಾದಿಯರ ಜೊತೆ ದಾವಾ ಆಸ್ತಿಗಳ ಕಬ್ಜೆಯಲ್ಲಿ ಇದ್ದಾರೆ ಎಂದರೆ ನಾವು ಸಹ ಕಬ್ಜೆಯಲ್ಲಿ ಇದ್ದೇವೆ ಎಂದು ಹೇಳುತ್ತಾರೆ.

11. ಮೃತ ಯಲ್ಲಪ್ಪ ಅವರ ಸಹೋದರಿ ಗಂಗವ್ವ ಇವರ ಮನೆಗೆ ಆಗಾಗ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಮೃತ ಯಲ್ಲಪ್ಪ ಇವರ ಕಾನೂನುಬದ್ಧ ಮದುವೆಯಾದ ಹೆಂಡತಿ ಎಂದರೆ ಸಾಕ್ಷಿದಾರರು 1ನೇ ಪ್ರತಿವಾದಿ ಮೃತ ಯಲ್ಲಪ್ಪ ಇವರ 2ನೇ ಹೆಂಡತಿ ಎಂದು ಹೇಳುತ್ತಾರೆ. 1ನೇ ಪ್ರತಿವಾದಿಯೇ ಮೃತ ಯಲ್ಲಪ್ಪ ಇವರ ಕಾನೂನುಬದ್ಧ ಮದುವೆಯಾದ ಹೆಂಡತಿ ಎಂದು ಗೊತ್ತಿದ್ದರೂ ಸಹ 1ನೇ ಪ್ರತಿವಾದಿ ಮೃತ ಯಲ್ಲಪ್ಪ ಇವರ 2ನೇ ಹೆಂಡತಿ ಎಂದು ಹೇಳಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

12. ಮನ್ನಿಕೇರಿ ಗ್ರಾಮದಲ್ಲಿ ಮೃತ ಯಲ್ಲಪ್ಪ ಇವರ ದೊಡ್ಡವ್ವ ಸತ್ತೆವ್ವ ಇದ್ದು, ಸದರಿ ಸತ್ತೆವ್ವ ಇವರಿಗೆ ರಾಮಪ್ಪ ಮಾಳಿ ಎಂದು ಮಗನಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗು ಮತ್ತು ಮೃತ ಯಲ್ಲಪ್ಪ ಇವರಿಗು ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ನನ್ನ ಮತ್ತು ಮೃತ ಯಲ್ಲಪ್ಪ ಇವರ ಮದುವೆಯಾಗದೇ ಇದ್ದರೂ ಸಹ ರಾಮಪ್ಪ ಮಾಳಿ ಇವರ ಮಾತು ಕೇಳಿ ನಾನು ಮೃತ ಯಲ್ಲಪ್ಪ ಇವರ ಹೆಂಡತಿ ಎಂದು ಹೇಳಿ ಈ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

13. ಸದರಿ ರಾಮಪ್ಪ ಮಾಳಿ ಮತ್ತು 1ನೇ ಪ್ರತಿವಾದಿಗು ಸಂಬಂಧ ಸರಿ ಇಲ್ಲದೇ ಇದ್ದುದ್ದರಿಂದ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ರಾಮಪ್ಪ ಮಾಳಿ ಇವರು ನನ್ನ ಕಡೆಯಿಂದ ಈ ಒಂದು ಸುಳ್ಳು ದಾವೆ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ